(ದಿನಾಂಕ : 02.06.2026 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು)

**ವಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಎಸ್.ಎಂ. ಹೆಚ್ ರವರಿಂದಃ**

ಆರೋಪಿ ನನಗೆ ನೇರವಾಗಿ ಪರಿಚಯ ಇಲ್ಲ ಎಂದರೆ ಸರಿ. ನಾನು ರೇಷ್ಮೇ ವ್ಯಾಪಾರ ಮಾಡುತ್ತಿದ್ದೇನೆ. ನನ್ನ ಮೊಬೈಲ್ ಸಂಖ್ಯೆ 8123667739 ಆಗಿರುತ್ತದೆ. ಶ್ರೀ ಚಾಮುಂಡೇಶ್ವರಿ ಎಂಬ ಹೆಸರಿನಲ್ಲಿ ನಾನು ಒಂದು ಚಿಟ್ ಫಂಡ್ ವ್ಯವಹಾರ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಚಿಟ್ ಫಂಡ್ ವ್ಯವಹಾರವನ್ನು ದಿಃ 05.07.2023 ರಂದು ಪ್ರಾರಂಭಿಸಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಚಿಟ್ ಫಂಡ್ ವ್ಯವಹಾರದಲ್ಲಿ ಆರೋಪಿಯ ಗಂಡ 1 ಚೀಟಿಯನ್ನು ಹಾಕಿದ್ದರು ಎಂದರೆ ಸರಿಯಲ್ಲ. ಸದರಿ ಚೀಟಿಯನ್ನು ಆರೋಪಿಯ ಗಂಡ ಪ್ರತಿ ತಿಂಗಳು ಪಾವತಿಮಾಡಿಕೊಂಡು ಹೋಗುತ್ತಿದ್ದರು ಎಂದರೆ ಸರಿಯಲ್ಲ. ಆರೋಪಿ ನನ್ನ ದೂರಿನಲ್ಲಿ ಹೇಳಿರುವಂತೆ ಸ್ನೇಹಿತೆ ಅಲ್ಲ ಎಂದರೆ ಸರಿಯಲ್ಲ. ಆರೋಪಿ ನನ್ನ ಸ್ನೇಹಿತನಾದ ಕುಮಾರ್ ರವರ ಮೂಲಕ ಪರಿಚಯ ಆಗಿರುತ್ತಾರೆ. ಸಾಕ್ಷಿಯು ಮುಂದುವರೆದು ಆರೋಪಿ ನನ್ನ ಬಳಿ ಆಗಾಗ ಹಣ ಪಡೆದುಕೊಳ್ಳುವುದು ವಾಪಸ್ಸು ನೀಡುವುದು ಮಾಡುತ್ತಿದ್ದರು ಎಂದು ನುಡಿದಿರುತ್ತಾರೆ. ಸದರಿ ವಿಚಾರವನ್ನು ನನ್ನ ದೂರಿನಲ್ಲಾಗಲಿ ಅಥವಾ ನೋಟಿಸ್ಸಿನಲ್ಲಾಗಲಿ ಹೇಳಿಲ್ಲ ಎಂದರೆ ಸರಿ.

ದಿಃ 21.02.2024 ರಂದು ಆರೋಪಿ ನನ್ನ ಬಳಿ ಹಣವನ್ನು ಪಡೆದುಕೊಂಡಿರುತ್ತಾರೆ. ಆರೋಪಿಗೆ ನಾನು ಹಣ ನೀಡುವ 1 ವಾರದ ಮುಂಚೆ ಆರೋಪಿ ನನ್ನ ಬಳಿ ಹಣವನ್ನು ಕೇಳಿದ್ದರು. ಆ ಬಗ್ಗೆ ನನ್ನ ದೂರಿನಲ್ಲಾಗಲಿ ಅಥವಾ ನೋಟಿಸ್ಸಿ ನಲ್ಲಾಗಲಿ ಹೇಳಿಲ್ಲ ಎಂದರೆ ಸರಿ. ಆರೋಪಿ ಹಾಗೂ ಆಕೆಯ ಗಂಡ ಇಬ್ಬರು ಮನೆಗೆ ಬಂದು ಹಣವನ್ನು ಪಡೆದುಕೊಂಡು ಹೋಗಿರುತ್ತಾರೆ. ಆ ರೀತಿ ಯಾವುದೇ ಹಣ ಪಡಯದಿದ್ದರೂ ಸಹಾ ನಾನು ಸುಳ್ಳು ಸಾಕ್ಷ್ಯಾ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಚಿಟ್ ಫಂಡ್ ವ್ಯವಹಾರದಲ್ಲಿ ಆರೋಪಿ ಗಂಡನಿಂದ ಭದ್ರತೆಗಾಗಿ ಪಡೆದುಕೊಂಡಂತಹ ಚೆಕ್ ವಿವಾದಿತ ಚೆಕ್ ಆಗಿರುತ್ತದೆ ಎಂದರೆ ಸರಿಯಲ್ಲ. ಆ ರೀತಿ ಭದ್ರತೆಗಾಗಿ ನೀಡಿದ ಚೆಕ್ ಅನ್ನು ದುರುಪಯೋಗ ಪಡಿಸಿಕೊಂಡ ನಾನು ಸುಳ್ಳು ಸಾಕ್ಷ್ಯಾ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಚಿಟ್ ಫಂಡ್ ವ್ಯವಹಾರಕ್ಕೆ ಸಂಬಂಧಿಸಿದಂತೆ ಆರೋಪಿ ಗಂಡನೊಂದಿಗೆ ನಾನು ವಾಟ್ಸಫ್ ಚಾಟ್ ನಲ್ಲಿ ಮಾತನಾಡಿರುತ್ತೇನೆ

ಎಂದರೆ ಸರಿಯಲ್ಲ. ನಾನು ಚಿಟ್ ಫಂಡ್ ವ್ಯವಹಾರದಲ್ಲಿ ಆರೋಪಿಯ ಗಂಡನಿಂದ ಹಣವನ್ನು ಕೇಳಿದ್ದು, ಹಣ ಕೊಡದಿದ್ದರೇ ಭದ್ರತೆಗಾಗಿ ನೀಡಿದ್ದಂತಹ ಚೆಕ್ ಅನ್ನು ಬ್ಯಾಂಕಿಗೆ ಹಾಜರುಪಡಿಸುತ್ತೇನೆ ಎಂದು ಆರೋಪಿಯ ಗಂಡನೊಂದಿಗೆ ಪೋನಿನ ಮೂಲಕ ಸಂಭಾಷಣೆ ಮಾಡಿರುತ್ತೇನೆ ಎಂದರೆ ಸರಿಯಲ್ಲ.

ಆರೋಪಿಗೆ ಹಣ ನೀಡಿದ ಸಂದರ್ಭದಲ್ಲಿ ನನ್ನ ಖಾತೆಯಲ್ಲಿ ಹಣ ಇತ್ತು ಎಂದು ತೋರಿಸಲು ನನ್ನ ಖಾತ ವರದಿಯನ್ನು ಹಾಜರುಪಡಿಸಿರುವುದಿಲ್ಲ. ಸಾಕ್ಷಿಯು ಮುಂದುವರೆದು ನನಗೆ ಹಾಜರುಪಡಿಸಲು ಯಾವುದೇ ತೊಂದರೆ ಇಲ್ಲ ಎಂದು ನುಡಿದಿರುತ್ತಾರೆ. ಆರೋಪಿ ಬರೆದುಕೊಟ್ಟಿದ್ದಾರೆ ಎಂದು ಹೇಳುವಂತಹ ಒಪ್ಪಂದ ಪತ್ರವನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಆರೋಪಿಗೆ ನಾನು 8 ಲಕ್ಷ ರೂ ಹಣ ನೀಡುವಾಗ ನಾನು, ನನ್ನ ಹೆಂಡತಿ, ನನ್ನ ಮಗ ಹಾಗೂ ಆರೋಪಿತೆ ಆಕೆಯ ಗಂಡ ಹಾಗೂ ಇಬ್ಬರು ಸಾಕ್ಷ್ಯಾಧಾರರು ಇದ್ದರು. ಅವರುಗಳೆಂದರೆ ವಸಂತಕುಮಾರ್ ಮತ್ತು ಜಯಸಿಂಹ ಎಂಬುವವರಿದ್ದರು. ಅವರನ್ನು ನ್ಯಾಯಾಲಯದ ಮುಂದೆ ವಿಚಾರಣೆ ಒಳಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ. ಹಣ ನೀಡಿದ ದಿನದಂದೆ ಆರೋಪಿಯ 2 ಚೆಕ್ ಗಳು ಹಾಗೂ ಆಕೆಯ ಗಂಡನ 2 ಚೆಕ್ ಗಳನ್ನು ನಾನು ಒಪ್ಪಂದದ ಪ್ರಕಾರ ಭದ್ರತೆಗಾಗಿ ಪಡೆದುಕೊಂಡಿರುತ್ತೇನೆ. ಆರೋಪಿ ಹಾಗೂ ಆಕೆಯ ಗಂಡ ಹಣ ಕೊಡದೇ ಇದ್ದ ಕಾರಣದಿಂದ ನಾನು ಚೆಕ್ ಗಳನ್ನು ಬ್ಯಾಂಕಿಗೆ ಹಾಜರುಪಡಿಸಿರುತ್ತೇನೆ. ಆರೋಪಿ ನನಗೆ ಪ್ರತ್ಯುತ್ತರ ನೋಟಿಸ್ಸನ್ನು ನೀಡಿರುತ್ತಾರೆ ಎಂದರೆ ಸರಿ. ಆರೋಪಿ ನೀಡಿದ ಪ್ರತ್ಯುತ್ತರ ನೋಟಿಸ್ಸನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ.

**ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗಾಗಿ ಮುಂದೂಡಲಾಯಿತು.**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸ. ಎಂ. ಒ. ನನ್ನ ಸಮಕ್ಷಮ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಲಯ, ಮಾಗಡಿ.